# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

**ವಿದ್ಯಾಸಂಗಮ, ಬೆಳಗಾವಿ-591 156**

**ನ್ಯಾಕ್ ಮಾನ್ಯತೆ ಬಿ+ ಗ್ರೇಡ್- 2021**

web site: www.rcub.ac.in    **ದೂರವಾಣಿ ಸಂಖ್ಯೆ: 0831-2565208, 2565219**    **E-mail:** cdc@rcub.ac.in

**ಕ್ರಮ ಸಂ. ರಾಚವಿ/ಬೆಳಗಾವಿ/ಸಿ.ಡಿ.ಸಿ(ಸಂಯೋಜನೆ)/2023–24/5**    **ದಿನಾಂಕ: 21–04–2023**

## ಅಧಿಸೂಚನೆ ಪ್ರಕಟಣೆ

**ವಿಷಯ: 2023–24 ನೇ ಶೈಕ್ಷಣಿಕ ಸಾಲಿಗಾಗಿ ಸ್ನಾತಕ ಹಾಗೂ ಸ್ನಾತಕೋತ್ತರ ಕೋರ್ಸಗಳಿಗೆ ವಿವಿಧ ಬಗೆಯ ಸಂಯೋಜನೆಗಳಿಗಾಗಿ ಅರ್ಜಿಗಳನ್ನು ಆಹ್ವಾನಿಸುತ್ತಿರುವ ಕುರಿತು.**

**ಉಲ್ಲೇಖ: 1. ಸರ್ಕಾರದ ಆದೇಶ ಸಂ: ಇಡಿ 47 ಯುಎನ್‌ಇ 2023, ಬೆಂಗಳೂರು, ದಿನಾಂಕ: 05–04–2023**
**2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 21–04–2023**

ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಸಂಯೋಜನೆಯ ಮೂಲಕ ವಿಶ್ವವಿದ್ಯಾಲಯವು ಪಠ್ಯಕ್ರಮ ರಚಿಸಿರುವ ಹಾಗೂ ಶುಲ್ಕಗಳನ್ನು ನಿಗದಿಪಡಿಸಿರುವ ಕೋರ್ಸಗಳೊಂದಿಗೆ ಬೆಳಗಾವಿ ಹಾಗೂ ವಿಜಯಪುರ ಜಿಲ್ಲೆಗಳಲ್ಲಿ 2023–24ನೇ ಸಾಲಿಗೆ ಹೊಸ ಮಹಾವಿದ್ಯಾಲಯಗಳನ್ನು ಪ್ರಾರಂಭಿಸಲು ಇಚ್ಛಿಸುವ ಸರ್ಕಾರದ ನಿಯಮಾವಳಿಗಳಂತೆ ನೋಂದಾಯಿಸಲ್ಪಟ್ಟ ಸಂಘ ಸಂಸ್ಥೆ/ ಟ್ರಸ್ಟ್‌ಗಳಿಂದ ಮತ್ತು 2022–23ನೇ ಸಾಲಿನಲ್ಲಿ ತಾತ್ಕಾಲಿಕ ಸಂಯೋಜನೆ ಹೊಂದಿರುವ ಹಾಗೂ 2022–23ನೇ ಸಾಲಿಗೆ ಶಾಶ್ವತ ಸಂಯೋಜನೆ ಕೊನೆಗೊಳ್ಳುವ ಪ್ರಸ್ತುತವಿರುವ ಮಹಾವಿದ್ಯಾಲಯಗಳಿಂದ ಬಿ.ಎ./ ಬಿ.ಎಸ್ಸಿ./ ಬಿ.ಕಾಂ./ ಬಿ.ಸಿ.ಎ./ ಬಿ.ಬಿ.ಎ./ ಬಿ.ಎಸ್.ಡಬ್ಲ್ಯೂ./ ಬಿ.ಇಡಿ./ ಬಿ.ಪಿ.ಇಡಿ./ ಎಂ.ಎ./ ಎಂ.ಕಾಂ./ ಎಂ.ಎಸ್ಸಿ./ ಎಂ.ಇಡಿ./ ಎಂ.ಪಿ.ಇಡಿ./ ಎಂ.ಎಸ್.ಡಬ್ಲ್ಯೂ. ಹಾಗೂ ಸರ್ಟಿಫಿಕೇಟ್ ಕೋರ್ಸ/ ಪಿ.ಜಿ. ಡಿಪ್ಲೋಮಾ. ಇತ್ಯಾದಿ ಸ್ನಾತಕ/ ಸ್ನಾತಕೋತ್ತರ ಕೋರ್ಸಗಳಿಗೆ ಮುಂದುವರಿಕೆ/ ವಿಸ್ತರಣೆ/ ಹೊಸ ಕೋರ್ಸ/ ಹೊಸ ವಿಷಯ/ ಪ್ರವೇಶ ಮಿತಿ ಹೆಚ್ಚಳ/ ಶಾಶ್ವತ ಸಂಯೋಜನೆ/ ಶಾಶ್ವತ ಸಂಯೋಜನೆ ನವೀಕರಣ ಸೇರಿದಂತೆ ಇತ್ಯಾದಿ ಸಂಯೋಜನೆಗಳಿಗೆ ಅರ್ಜಿಗಳನ್ನು ಆಹ್ವಾನಿಸಿದೆ. ಮುಂದುವರೆದು, ಮಹಾವಿದ್ಯಾಲಯಗಳ ಹೆಸರು ಬದಲಾವಣೆ, ಮಹಾವಿದ್ಯಾಲಯ ಸ್ಥಗಿತಗೊಳಿಸಲು, ಮಹಾವಿದ್ಯಾಲಯಗಳ ಆಡಳಿತ ಮಂಡಳಿಗಳ ವರ್ಗವಣೆ, ಮಹಾವಿದ್ಯಾಲಯದ ಸ್ಥಳಾಂತರ ಇತ್ಯಾದಿಗಳನ್ನು ಮಾಡಬಯಸುವುದಕ್ಕೆ ಸಂಬಂಧಿಸಿದ ದಾಖಲೆಗಳೊಂದಿಗೆ ಸಂಬಂಧಿತ ಶುಲ್ಕ ಮತ್ತು ಅದರ ಜೊತೆಗೆ ಪ್ರತ್ಯೇಕವಾಗಿ ಕ್ರೀಡಾ ಶುಲ್ಕ ರೂ.2,500/–ಗಳನ್ನು ಪಾವತಿಸಿ, ಕರ್ನಾಟಕ ಸರ್ಕಾರದ ಸಂಯೋಜನೆಗೆ ಸಂಬಂಧಿಸಿದಂತೆ ಅಭಿವೃದ್ಧಿ ಪಡಿಸಿದ UUCMS ತಂತ್ರಾಂಶದ Affiliation Module ನಲ್ಲಿರುವಂತೆ ಮಾಹಿತಿಯನ್ನು ಈ ಮೂಲಕ ತಿಳಿಸಿರುವ http://uucms.karnataka.gov.in ಲಿಂಕ್‌ನ ಮುಖಾಂತರ ಅರ್ಜಿಯನ್ನು ಸಲ್ಲಿಸುವುದು ಮತ್ತು ಮಾಹಿತಿಗಳನ್ನು ಒದಗಿಸುವುದು.

ಯಾವುದೇ ಮಹಾವಿದ್ಯಾಲಯದವರು ಸ್ನಾತಕ ಕೋರ್ಸ ಪ್ರಾರಂಭಿಸಿ ಕನಿಷ್ಠ ಐದು ವರ್ಷಗಳನ್ನು ಪೂರ್ಣಗೊಳಿಸಿದ್ದಲ್ಲಿ ಅಂತಹ ಮಹಾವಿದ್ಯಾಲಯದವರು ಸ್ನಾತಕೋತ್ತರ ಕೋರ್ಸಗಳನ್ನು ಪ್ರಾರಂಭಿಸಬಹುದಾಗಿದೆ. ಮುಂದುವರೆದು, ಎಂ.ಬಿ.ಎ./ ಎಂ.ಸಿ.ಎ./ ಬಿ.ಇಡಿ/ ಬಿ.ಪಿ.ಇಡಿ/ ಎಂ.ಇಡಿ./ ಎಂ.ಪಿ.ಇಡಿ. ಇಂತಹ ಕೋರ್ಸ ಪ್ರಾರಂಭಿಸಲು ಎ.ಐ.ಸಿ.ಟಿ.ಇ./ ಎನ್.ಸಿ.ಟಿ.ಇ. ಅಥವಾ ಅಂತಹ ಸಕ್ಷಮ ಪ್ರಾಧಿಕಾರದಿಂದ ಕಡ್ಡಾಯವಾಗಿ ಮಾನ್ಯತೆಯನ್ನು ಪಡೆದುಕೊಂಡಿರಬೇಕು. ಸಂಯೋಜನೆಗೆ ಸಂಬಂಧಿಸಿದ ಶುಲ್ಕಗಳ ವಿವರ ಮತ್ತು ಇನ್ನಿತರ ಮಾಹಿತಿಯನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್ ವಿಳಾಸ: http://www.rcub.ac.in ದಲ್ಲಿ CDC Link ನಲ್ಲಿ Affiliation Notification-2023–24ನ್ನು ನೋಡಬಹುದಾಗಿದೆ. ಹೊಸ ಸಂಶೋಧನಾ ಕೇಂದ್ರದ ಮಾನ್ಯತೆಗಾಗಿ ಅರ್ಹ ಮಹಾವಿದ್ಯಾಲಯಗಳು ಹಾಗೂ 2022–23ನೇ ಸಾಲಿಗೆ ಮಾನ್ಯತೆ ಕೊನೆಗೊಳ್ಳುವ ಸಂಶೋಧನಾ ಕೇಂದ್ರಗಳ ಮಾನ್ಯತೆ ನವೀಕರಣಕ್ಕಾಗಿ ಅರ್ಜಿಗಳನ್ನು ಭೌತಿಕ ರೂಪದಲ್ಲಿ ಸಲ್ಲಿಸಬಹುದಾಗಿದೆ. ಸಂಯೋಜನಾ ಪ್ರಕ್ರಿಯೆಯನ್ನು ಆರಂಭಿಸುವುದಕ್ಕೂ ಮುನ್ನ ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಅಳವಡಿಸಿರುವ ಸಂಯೋಜನಾ ವಿವರಗಳನ್ನು ಗಮನಿಸುವುದು.

| **ಆನ್‌ಲೈನ್‌ಮೂಲಕ ಸಂಯೋಜನಾ ಅರ್ಜಿ ಸಲ್ಲಿಸುವುದಕ್ಕಾಗಿ ನಿಗದಿಪಡಿಸಲಾದ ದಿನಾಂಕಗಳು** | | |
|---|---|---|
| 1 | ಸಂಯೋಜನಾ ಅರ್ಜಿ ಸಲ್ಲಿಸಲು ದಂಡ ರಹಿತ ಶುಲ್ಕದೊಂದಿಗೆ ಕೊನೆಯ ದಿನಾಂಕ | **29.04.2023 ಸಂಜೆ 5.00ರ ಒಳಗಾಗಿ** |
| 2 | ಸಂಯೋಜನಾ ಅರ್ಜಿ ಸಲ್ಲಿಸಲು ರೂ.10,000/– ದಂಡ ಶುಲ್ಕದೊಂದಿಗೆ ಕೊನೆಯ ದಿನಾಂಕ | **06.05.2023 ಸಂಜೆ 5.00ರ ಒಳಗೆ** |
| 3 | ಸಂಯೋಜನಾ ಅರ್ಜಿ ಸಲ್ಲಿಸಲು ರೂ.10,000/– ಮತ್ತು ಪ್ರತಿ ದಿನ ರೂ.1,200/– ರಂತೆ ದಂಡ ಶುಲ್ಕದೊಂದಿಗೆ ದಿನಾಂಕ | **11.05.2023 ಸಂಜೆ 5.00ರ ಒಳಗೆ** |
| **ವಿಶೇಷ ಸೂಚನೆ: ದಿನಾಂಕ: 11.05.2023 ರ ನಂತರ ಸಲ್ಲಿಸುವ ಯಾವುದೇ ಸಂಯೋಜನಾ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.** | | |

| | |
|---|---|
| **ಸಹಿ/–**<br>**ನಿರ್ದೇಶಕರು,**<br>**ಕಾಲೇಜು ಅಭಿವೃದ್ಧಿ ಮಂಡಳಿ**<br>**ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ** | **ಸಹಿ/–**<br>**ಕುಲಸಚಿವರು**<br>**ರಾಣಿ ಚನ್ನಮ್ಮ ವಿಶ್ವವಿದ್ಯಾಲಯ,**<br>**ಬೆಳಗಾವಿ** |

ಹೆಚ್ಚಿನ ಮಾಹಿತಿಗಾಗಿ ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿಯ ದೂರವಾಣಿ ಸಂಖ್ಯೆ: 0831–2565219, 208 ಕ್ಕೆ ಸಂಪರ್ಕಿಸಬಹುದಾಗಿದೆ.